ಆಸ್ಪತ್ರೆ ಸಂಖ್ಯೆಗಳು

1577(1923); ಶ್ರೀ ದೊಡ್ಡನಗೌಡ ಹನಮಗೌಡ ಪಾಟೀಲ (ಕುಷ್ಟಗಿ)

ಅ) ಕುಷ್ಟಗಿ ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು; ಯಾವ ಯಾವ ಗ್ರಾಮಗಳಲ್ಲಿ ಎಷ್ಟು ಹಾಸಿಗೆಯ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ;

ಆ) ಈ ಆಸ್ಪತ್ರೆಗಳಿಗೆ ಮಂಜೂರಾದ ಹುದ್ದೆಗಳೆಷ್ಟು; ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಎಷ್ಟು ಹುದ್ದೆಗಳು ಖಾಲಿ ಇರುತ್ತವೆ; ಹಾಲಿ ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು; (ಸಂಪೂರ್ಣ ವಿವರ ನೀಡುವುದು)

ಇ) ಕುಷ್ಟಗಿ ಪಟ್ಟಣದ 100 ಹಾಸಿಗೆಗಳ ಆಸ್ಪತ್ರೆಗೆ ಹಣಕಾಸು ಅನುಮತಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸ್ವತಂತ್ರವಾಗಿ ಹಣಕಾಸು ಅನುಮತಿಗೆ ಕ್ರಮ ಕೈಗೊಂಡು ಯಾವಾಗ ಅನುಮತಿ ನೀಡಲಾಗುವುದು; (ಸಂಪೂರ್ಣ ವಿವರ ನೀಡುವುದು);

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಕುಷ್ಟಗಿ ತಾಲ್ಲೂಕಿನಲ್ಲಿರುವ 9 ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಒಂದು ಸಮುದಾಯ ಆರೋಗ್ಯ ಕೇಂದ್ರ ಹಾಗೂ ಒಂದು ತಾಲ್ಲೂಕು ಮಟ್ಟದ ಸಾರ್ವಜನಿಕ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿವೆ. ವಿವರ ಈ ಕೆಳಕಂಡಂತಿದೆ.

ಅನುಬಂಧ–1	
ಆಸ್ಪತ್ರೆ ಹೆಸರು	ಹಾಸಿಗೆ ಸಾಮರ್ಥ್ಯ
ಪ್ರಾಥಮಿಕ ಆರೋಗ್ಯ ಕೇಂದ್ರ	
ಹನುಮನಾಳ	6
ಹನುಮಸಾಗರ	6
ಹಿರೇಗೊಣ್ಣಾಗರ	6
ಹಿರೇಮನ್ನಾಪುರ	6

ಹೂಲಗೇರಾ	6
ಮಾಲಗಿತ್ತಿ	6
ಮುದೇನೂರು	6
ಚಳಗೇರಾ	6
ದೋಟಿಹಾಳ್	6
ಸಮುದಾಯ ಆರೋಗ್ಯ ಕೇಂದ್ರ	
ತಾವರೆಗೆರೆ	30
ತಾಲ್ಲೂಕು ಮಟ್ಟದ ಆಸ್ಪತ್ರೆ	
ಕುಷ್ಟಗಿ	100

ಆ) ಸದರಿ ಆಸ್ಪತ್ರೆಗಳಿಗೆ ಮಂಜೂರಾದ ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳು ಅನುಬಂಧ–2ರಲ್ಲಿ ನೀಡಲಾಗಿದೆ. ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕ ಸಬಲೀಕರಣ ಇಲಾಖೆ ದಿನಾಂಕ: 23.01.2015ರಂದು ವಿಕಲಚೇತನರಿಗೆ ಮೀಸಲಾತಿ ಕುರಿತಂತೆ ಸಭೆ ಜರುಗಿದ್ದು, ಸಭೆಯ ನಡವಳಿ ಇನ್ನೂ ಅನುಮೋದನೆ ಆಗಬೇಕಾಗಿದೆ. ಈ ನಡವಳಿಯ ಆಧಾರದ ಮೇಲೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅಂತಿಮ ಅಧಿಸೂಚನೆ ಹೊರಡಿಸಲಿದೆ. ತದನಂತರ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು.

ಇ) 2015–16ನೇ ಸಾಲಿನ ಆಯವ್ಯಯ ತಯಾರಿಕಾ ಸಂದರ್ಭದಲ್ಲಿ ಜಿಲ್ಲಾ ವಲಯದಲ್ಲಿನ ಹುದ್ದೆಗಳನ್ನು ಕಡಿತಗೊಳಿಸಿ, ಅಷ್ಟೇ ಹುದ್ದೆಗಳಿಗೆ ಆಯವ್ಯಯವನ್ನು ರಾಜ್ಯವಲಯದಲ್ಲಿ ನಿಗದಿ ಪಡಿಸಿಕೊಳ್ಳುವ ಷರತ್ತಿಗೆ ಒಳಪಟ್ಟು ಕುಷ್ಟಗಿ ಸಾರ್ವಜನಿಕ ಆಸ್ಪತ್ರೆಗಳನ್ನು ಜಿಲ್ಲಾ ಪಂಚಾಯತ್ ವಲಯದಿಂದ ರಾಜ್ಯ ವಲಯಕ್ಕೆ ವರ್ಗಾಯಿಸಲು ಅನುಮೋದನೆ ನೀಡಲಾಗಿದೆ.

Page 1

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಎ.ಜಿ,ಸಿ ಮತ್ತು ಡಿ ಹುದ್ದೆಗಳ ಮಂಜೂರು, ಕಾರ್ಯನಿರತ, ಖಾಲಿ ಹುದ್ದೆಗಳ ವಿವರ ದಿನಾಂಕ: 11-02-2015 ರಲ್ಲಿ ಇದ್ದಂತೆ.

ಕ್ರ. ಸಂ.	ಹುದ್ದೆಯ ಹೆಸರು	ಗುಂಪು A/B/C/D	ಕುಷ್ಟಗಿ ತಾಲೂಕು		
			ಮಂಜೂರಾದ ಹುದ್ದೆಗಳ ಸಂಖ್ಯೆ		
			ಮಂಜೂರು	ಕಾರ್ಯನಿರತ	ಖಾಲಿ
1	ತಾಲೂಕಾ ಆರೋಗ್ಯ ಅಧಿಕಾರಿ	A	1	1	0
2	ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ	A	9	2	7
3	ತಜ್ಞ-ವೈದ್ಯಾಧಿಕಾರಿಗಳು	A	6	2	4
4	ಹಿರಿಯ ವೈದ್ಯಾಧಿಕಾರಿ	A	2	1	1
5	ದಂತ ಆರೋಗ್ಯಾಧಿಕಾರಿ	A	2	0	2
6	ಕ್ಷೇತ್ರ ಆರೋಗ್ಯ ಶಿಕ್ಷಣ ಅಧಿಕಾರಿ	C	3	1	2
7	ಹಿರಿಯ ಆರೋಗ್ಯ ಸಹಾಯಕ (ಮಹಿಳಾ)	C	7	5	2
8	ಹಿರಿಯ ಆರೋಗ್ಯ ಸಹಾಯಕ (ಪುರುಷ)	C	5	4	1
9	ಕಿರಿಯ ಆರೋಗ್ಯ ಸಹಾಯಕ (ಪುರುಷ)	C	31	21	10
10	ಕಿರಿಯ ಆರೋಗ್ಯ ಸಹಾಯಕ (ಮಹಿಳಾ)	C	39	34	5
11	ಹಿರಿಯ ವೈದ್ಯೇತರ ಮೇಲ್ವಿಚಾರಕರು	C	1	0	1
12	ಶುಶ್ರೂಷಕರು	C	17	16	1
13	ಅರೇ ವೈದ್ಯಕೀಯ ಕಾರ್ಯಕರ್ತರು	C	0	0	0

14	ಹಿರಿಯ ಫಾರ್ಮಾಸಿಸ್ಟ್	C	1	1	0
15	ಫಾರ್ಮಾಸಿಸ್ಟ್	C	11	11	0
16	ಕಛೇರಿ ಅಧೀಕ್ಷಕರು	C	1	1	0
17	ಪ್ರಥಮ ದರ್ಜೆ ಸಹಾಯಕರು	C	9	2	7
18	ದ್ವಿತೀಯ ದರ್ಜೆ ಸಹಾಯಕರು	C	5	5	0
19	ಕ್ಲರ್ಕ್ ಕಂ ಟೈಪಿಸ್ಟ್	C	1	1	0
20	ಕಿರಿಯ ವೈದ್ಯಕೀಯ ಪ್ರಯೋಗ ಶಾಲಾ ಟೆಕ್ನಾಲಜಿಸ್ಟ್	C	10	6	4
21	ಹಿರಿಯ ವೈದ್ಯಕೀಯ ಪ್ರಯೋಗ ಶಾಲಾ ಟೆಕ್ನಾಲಜಿಸ್ಟ್	C	1	0	1
22	ಕ್ಷ-ಕಿರಣ ತಂತ್ರಜ್ಞರು.	C	2	2	0
23	ನೇತ್ರ ಅಧಿಕಾರಿಗಳು	C	2	0	2
24	ವಾಹನ ಚಾಲಕರು	C	5	2	3
25	"ಡಿ" ವರ್ಗ ನೌಕರರು	D	39	15	24
		ಒಟ್ಟು	210	133	77